


ಹತ್ತಿರವಾದುದು ಕಿರುತೆರೆ ಮೂಲಕ. ವಿಜಯ್‌ಪ್ರಕಾಶ್‌ರ ಹಾಡುಗಾರಿಕೆ ಸಹೃದಯರ ಮನಸೂರೆಗೊಂಡದ್ದು ರಿಯಾಲಿಟಿ ಷೋಗಳ ಮೂಲಕ. ಬೇರೆಲ್ಲ ಸಂಗೀತ ನಿರ್ದೇಶಕರಿಗಿಂತಲೂ ಅರ್ಜುನ್ ಜನ್ಯ ಕನ್ನಡ ಜನರಿಗೆ ಹೆಚ್ಚು ಗೊತ್ತಿರುವುದಕ್ಕೆ ಕಾರಣ ಅವರ ಸಿನಿಮಾ ಸಂಗೀತವಲ್ಲ, ರಿಯಾಲಿಟಿ ಷೋಗಳಲ್ಲಿನ ದರ್ಶನ. ಸಿನಿಮಾಗಳಲ್ಲಿ ದೊಡ್ಡ ಗೆಲುವು ಕಾಣದ ಸೃಜನ್ ಲೋಕೇಶ್ ಕಿರುತೆರೆಯಲ್ಲಿ 'ಸೃಜಾ' ರೂಪದಲ್ಲಿ ಮನೆಮಾತು. ಅವರ 'ಕಾಮಿಡಿ ಟಾಕೀಸ್' ನೋಡದ, ನೋಡಿ ನಗದ ಕಿರುತೆರೆ ಪ್ರೇಕ್ಷಕ ಯಾರಾದರೂ ಇರುವರೇ? ಅನುಶ್ರೀ, ಅಕುಲ್ ಬಾಲಾಜಿ ಅವರಂಥ ನಿರೂಪಕರು ಕಿರುತೆರೆ ನಿರೂಪಕರಾಗಿ ಗಳಿಸಿರುವ ಜನಪ್ರಿಯತೆ ಕೂಡ ಟೀವಿಯ ಮಾಂತ್ರಿಕಶಕ್ತಿಗೆ ಉದಾಹರಣೆಯಂತಿದೆ.

## ವ್ಯಕ್ತಿ- ವ್ಯಕ್ತಿತ್ವದ ದರ್ಶನ

ಸಿನಿಮಾ ಮತ್ತು ಟೀವಿ ಮಾಧ್ಯಮಗಳ ನಡುವೆ ಇರುವ ಬಹುಮುಖ್ಯ ವ್ಯತ್ಯಾಸ ಕಲಾವಿದರನ್ನು ಬಿಂಬಿಸುವ ರೀತಿ. ಸಿನಿಮಾದಲ್ಲಿ ಕಲಾವಿದರನ್ನು ವಿಜೃಂಭಿಸಿದರೆ, ಟೀವಿಯಲ್ಲಿ ಅವರ ವ್ಯಕ್ತಿತ್ವವನ್ನು ಅನಾವರಣಗೊಳಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿಯೇ 'ಸಿನಿಮಾದಲ್ಲಿ ನಾವು ನಟರಾಗಿ ಬಿಂಬಿಸಿಕೊಂಡರೆ, ಟೀವಿಯಲ್ಲಿ ನಮ್ಮ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ' ಎನ್ನುವ ರಮೇಶ್ ಅರವಿಂದ್‌ರ ಮಾತನ್ನು ಗಮನಿಸಬೇಕು.

ವ್ಯಕ್ತಿ ಹಾಗೂ ವ್ಯಕ್ತಿತ್ವ ಕಿರುತೆರೆಯ ರಿಯಾಲಿಟಿ ಷೋಗಳಲ್ಲಿ ಪ್ರಧಾನವಾಗಿ ಕಾಣಿಸುತ್ತದೆ. ಸಿನಿಮಾಗಳಲ್ಲಿ ನೃತ್ಯ–ಸಾಹಸ ಪ್ರಧಾನ ದೃಶ್ಯಗಳಲ್ಲಿ ಗಮನಸೆಳೆಯುವ ಪುನೀತ್‌ರಲ್ಲಿನ ಮುಗ್ಧ ಹಾಗೂ ಮಾನವೀಯ ವ್ಯಕ್ತಿತ್ವ ಪ್ರೇಕ್ಷಕರ ಗಮನಕ್ಕೆ ಬಂದುದು 'ಕನ್ನಡದ ಕೋಟ್ಯಧಿಪತಿ' ರಿಯಾಲಿಟಿ ಷೋ

## ಬೆಳ್ಳಿತೆರೆಗೆ ಕೊಡುಗೆ

ಸಿನಿಮಾ ಕಲಾವಿದರು ಕಿರುತೆರೆಯ ರಿಯಾಲಿಟಿ ಷೋ, ಧಾರಾವಾಹಿಗಳಲ್ಲಿ ಗುರ್ತಿಸಿಕೊಳ್ಳುವಂತೆಯೇ ಕೆಲವು ಕಿರುತೆರೆ ಕಲಾವಿದರು ಸಿನಿಮಾಗಳಲ್ಲಿ ಕೂಡ ಅವಕಾಶ ಪಡೆಯುವುದಿದೆ. ಇವರಲ್ಲಿ ಕನ್ನಡದ ಹೊಸಪೀಳಿಗೆಯ ಜನಪ್ರಿಯ ಕಲಾವಿದರಾದ ಯಶ್, ಗಣೇಶ್ ಹಾಗೂ ರಾಧಿಕಾ ಪಂಡಿತ್ ಅವರನ್ನು ಪ್ರಮುಖವಾಗಿ ಗುರ್ತಿಸಬೇಕು. ಈ ಮೂವರೂ ಕಿರುತೆರೆ ಧಾರಾವಾಹಿಗಳ ಮೂಲಕವೇ ವೃತ್ತಿಜೀವನ ಆರಂಭಿಸಿದವರು. ಕಿರುತೆರೆ ಅವರ ಪಾಲಿಗೆ ತವರುಮನೆ.

ದಕ್ಷಿಣ ಭಾರತದ ಜನಪ್ರಿಯ ನಟ ಪ್ರಕಾಶ್ ರೈ ಕೂಡ ಕಿರುತೆರೆ ಜೊತೆ ನಂಟು ಹೊಂದಿದವರೇ. ದೂರದರ್ಶನದ ಕ್ಲಾಸಿಕ್‌ಗಳಲ್ಲೊಂದಾಗ 'ಗುಡ್ಡದ ಭೂತ' ಧಾರಾವಾಹಿಯ ಮುಖ್ಯಪಾತ್ರದಲ್ಲಿ ಅವರು ನಟಿಸಿದ್ದರು. ತೆಲುಗು ಸಿನಿಮಾಗಳಲ್ಲಿ ಸೂಪರ್ ಸ್ಟಾರ್‌ಗಳಿಗೆ ಅಮ್ಮನಾಗಿ ನಟಿಸುವ ಮೂಲಕ 'ಸೂಪರ್ ಅಮ್ಮ'ನಾಗಿ ಗುರ್ತಿಸಿಕೊಂಡಿರುವ ಪವಿತ್ರಾ ಲೋಕೇಶ್ ಅವರು ಕೂಡ ಮೊದಲು ತೆಲುಗು ಧಾರಾವಾಹಿಗಳಲ್ಲಿ ನಟಿಸಿ ಜನಪ್ರಿಯತೆ ಗಳಿಸಿದವರೇ ಆಗಿದ್ದಾರೆ. ಪ್ರಸ್ತುತ ಕನ್ನಡ ಚಿತ್ರರಂಗದ ಪ್ರತಿಭಾವಂತ ಪೋಷಕನಟರಾದ ಅಚ್ಯುತ ಕುಮಾರ್ ಕೂಡ ಕಿರುತೆರೆಯಿಂದ ಹಿರಿತೆರೆಗೆ ಬಂದವರೇ.


